ಮಳಿಗೆ ಮತ್ತು ನಿವೇಶನಗಳನ್ನು ಮೂರು ರೀತಿ ಹಂಚಿಕೆ ಮಾಡಲಾಗುತ್ತದೆ. ಅವುಗಳೆಂದರೆ:

1) ಸಾಮಾನ್ಯ ಹಂಚಿಕೆ

2) ಗೌಪ್ಯ ಬಿಡ್ ಪದ್ಧತಿ

3) ಬಹಿರಂಗ ಹರಾಜು

ಸಾಮಾನ್ಯ ಹಂಚಿಕೆ ಪದ್ಧತಿಯಲ್ಲಿ ಪ್ರಕಟಣೆಗೆ ಎದುರಾಗಿ ಬಂದಂತಹ ಅರ್ಜಿಗಳನ್ನು ಸರ್ಕಾರವು ರಚಿಸಿರುವ ರಾಜ್ಯ ಮಟ್ಟದ ಮಳಿಗೆ ಹಂಚಿಕೆ ಸಮಿತಿಯ ಮುಂದೆ ಮಂಡಿಸಿ ಅದರಂತೆ ಸರ್ಕಾರವು ನಿಗದಿಪಡಿಸಿರುವ ನಿಯಮವಳಿಗಳಂತೆ ಹಂಚಿಕೆ ಮಾಡಲಾಗುತ್ತದೆ.

ಗೌಪ್ಯ ಬಿಡ್ ಪದ್ಧತಿ ಮತ್ತು ಬಹಿರಂಗ ಹರಾಜು ಪದ್ಧತಿಯಲ್ಲಿ ಮಳಿಗೆ/ನಿವೇಶನಗಳಿಗೆ ಅತಿ ಹೆಚ್ಚಿನ ದರ ಸೂಚಿಸುವವರಿಗೆ ಹಂಚಿಕೆ ಮಾಡಲಾಗುತ್ತಿದೆ.

1043 (1193) ಶ್ರೀ ಲಾಲಾಜಿ ಆರ್. ಮೆಂಡನ್ (ಕ್ಕಾಪು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಲಿಮಾರು ಉಪ್ಪು ನೀರು ತಡೆ ಕಿಂಡಿ ಅಣೆಕಟ್ಟು ಬ್ರಿಟೀಷ್ ಕಾಲದಾಗಿದ್ದು ಇದು ಪೂರ್ಣವಾಗಿ ನವೀಕರಿಸುವ ಪ್ರಸ್ತಾವನೆ ಅಧಿಕಾರಗಳಿಂದ ಸರ್ಕಾರಕ್ಕೆ ಬಂದಿದೆಯೇ;

ಆ) ಹೌದಾದಲ್ಲಿ ಇದರ ನವೀಕರಣ ಹಾಗೂ ಬದಿಕಟ್ಟುವಿಕೆಗೆ ತುರ್ತು ಅಗತ್ಯಕ್ಕೆ ತಕ್ಕಂತೆ ಅನುದಾನ ಬಿಡುಗಡೆ ನೀಡುವುದಕ್ಕೆ ಸರ್ಕಾರಕ್ಕೆ ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) ಬಂದಿದೆ.

ಆ) ನಬಾರ್ಡ್‌ನ ಆರ್.ಐ.ಡಿ.ಎಫ್-12ರಡಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದ್ದು, ಈ ಹಂತದಲ್ಲಿ ಅನುದಾನದ ಬಿಡುಗಡೆ ಬಗ್ಗೆ ಖಚಿತವಾಗಿ ಕಾಲಮಿತಿಯನ್ನು ಹೇಳಲು ಸಾಧ್ಯವಾಗುವುದಿಲ್ಲ.

1044 (1326) ಶ್ರೀ ಎಂ. ಮಹದೇವ (ಕೃಷ್ಣರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಂದಾಯ ಇಲಾಖೆಯ ಮಹತ್ವಾಕಾಂಕ್ಷ ಯೋಜನೆಯಾದ ಭೂಮಿ ಯೋಜನೆಯನ್ನು ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಗಿದೆಯೆ;

ಆ) ಭೂಮಿ ಯೋಜನೆಯನ್ನು ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕು, ಹೋಬಳಿ ಮಟ್ಟಕ್ಕೂ ವಿಸ್ತರಿಸುವ ಯೋಜನೆಯು ಕುಂಠಿತವಾಗಿರುವುದು ಸರ್ಕರದ ಗಮನಕ್ಕೆ ಬಂದಿದೆಯೆ;

ಇ) ತಾಲ್ಲೂಕು ಮತ್ತು ಹೋಬಳಿ ಮಟ್ಟಕ್ಕೂ ಭೂಮಿ ಯೋಜನೆಯನ್ನು ವಿಸ್ತರಿಸುವಲ್ಲಿ ವಿಳಂಬವಾಗಿರುವುದು ನಿಜವೆ;

ಈ) ಈ ಯೋಜನೆಯನ್ನು ತ್ವರಿತಗತಿಯಲ್ಲಿ ಜಾರಿಗೆ ತರಲು ಸರ್ಕಾರವು ಹಮ್ಮಿಕೊಂಡಿರುವ ವಿಶೇಷ ಕಾರ್ಯಕ್ರಮಗಳು ಏನು ವಿವರ ಒದಗಿಸುವುದು:

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಹೌದು.

ಆ) ಇಲ್ಲ. ಭೂಮಿ ಕೇಂದ್ರಗಳನ್ನು ರಾಜ್ಯದ 176 ತಾಲ್ಲೂಕುಗಳು ಹಾಗೂ ಕಂದಾಯ ಇಲಾಖೆಯು 27 ವಿಶೇಷ ತಹಸೀಲ್ದಾರ್‌ಗಳನ್ನು ನೇಮಕ ಮಾಡಿರುವ ಸ್ಥಳಗಳಲ್ಲಿಯೂ ಭೂಮಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳಲ್ಲದೆ, ಈ ಯೋಜನೆಯನ್ನು ರಾಜ್ಯದ ಎಲ್ಲಾ ಹೋಬಳಿಗಳಲ್ಲಿಯೂ ಹಂತ ಹಂತವಾಗಿ ಪ್ರಾರಂಭಿಸಿ, ಯೋಜನೆಯ ಪ್ರಾರಂಭದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ವಿಸ್ತರಿಸಲಾಗುವುದು.

ಇ) ಭೂಮಿ ಯೋಜನೆಯನ್ನು ತಾಲ್ಲೂಕು ಮಟ್ಟದಲ್ಲಿ ಮೊದಲು ಪ್ರಾರಂಭಿಸಲಾಗಿತ್ತು. ಎಲ್ಲಾ ತಾಲ್ಲೂಕುಗಳಲ್ಲಿಯೂ ಭೂಮಿ ಯೋಜನೆ ಕಾರ್ಯಗತಗೊಂಡಿರುವುದರಿಂದ, ಈ ಯೋಜನೆ ತಾಲ್ಲೂಕು ಮಟ್ಟದಲ್ಲಿ ವಿಳಂಬವಾಗಿರುವುದಿಲ್ಲ. ಮೇಲೆ ಸೂಚಿಸಿರುವಂತೆ ಈಗ ಈ ಯೋಜನೆಯನ್ನು ಹೋಬಳಿ ಮಟ್ಟದಕ್ಕೆ ವಿಕೇಂದ್ರಿಕರಿಸಲಾಗುತ್ತಿದೆ.

ಈ) ಸರ್ಕಾರವು ಈ ಯೋಜನೆಯನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಹೋಬಳಿ ಮಟ್ಟಕ್ಕೆ ವಿಕೇಂದ್ರೀಕರಿಸಲು ನಿರ್ಧರಿಸಲಾಗಿದ್ದು, ಈ ಯೋಜನೆಯನ್ನು ರಾಜ್ಯದ ಎಲ್ಲಾ ಹೋಬಳಿಗಳಲ್ಲಿಯೂ ಹಂತ ಹಂತವಾಗಿ ಪ್ರಾರಂಭಿಸಿ, ಯೋಜನೆಯ ಪ್ರಾರಂಭದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ರಾಜ್ಯದ ಎಲ್ಲಾ ಹೋಬಳಿಗಳಿಗೂ ವಿಸ್ತರಿಸಲಾಗುವುದು.

1045 (1475) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ವಿಧಾನ ಸಭೆ ಕ್ಷೇತ್ರದಲ್ಲಿ ಇರುವ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು ಹಾಗೂ ಇವುಗಳನ್ನು ಯಾವಾಗ ನಿರ್ಮಿಸಲಾಯಿತು;

ಆ) ಈ ಕೆರೆಗಳನ್ನು ನಿರ್ಮಿಸುವಾಗ ಎಷ್ಟು ಎಕರೆಗೆ ನೀರಾವರಿ ಸೌಲಭ್ಯಗಳನ್ನು ಒದಗಿಸುವ ಗುರಿ ಹೊಂದಲಾಗಿತ್ತು.

ಇ) ಈಗ ಈ ಕೆರೆಗಳಿಂದ ಎಷ್ಟು ಎಕರೆಗೆ ನೀರಾವರಿ ಸೌಲಭ್ಯವಾಗುತ್ತಿದೆ: (ಈ ಕೆರೆಗಳನ್ನು ನಿರ್ಮಿಸಲು ತಗುಲಿದ ಅಂದಾಜು ವೆಚ್ಚವೆಷ್ಟು ಎಂಬುದರ ವಿವರಗಳನ್ನು ಕೆರೆವಾರು ಅಂಕಿ ಅಂಶಗಳಲ್ಲಿ ಒದಗಿಸುವುದು);

ಈ) ಕೆರೆಗಳನ್ನು ನಿರ್ಮಿಸುವ ಮೊದಲು ಹೊಂದಿದ ನೀರಾವರಿ ಸೌಲಭ್ಯದ ಗುರಿಯನ್ನು ಕೆರೆ ನಿರ್ಮಿಸಿದ ನಂತರ ಮುಟ್ಟಲು ಅಸಾಧ್ಯವಾಗಿರಲು ಕಾರಣವೇನು;

ಉ) ಸದರಿ ಮತಕ್ಷೇತ್ರದಲ್ಲಿ ಎಷ್ಟು ಹೊಸಕೆರೆಗಳನ್ನು ನಿರ್ಮಿಸಲು ಸರ್ವೆ ಮಾಡಲಾಗಿತ್ತು.

ಊ) ಈ ಪೈಕಿ ಯಾವ ಯಾವ ಸ್ಥಳಗಳಲ್ಲಿ ಹೊಸಕೆರೆಗಳನ್ನು ನಿರ್ಮಿಸಲಾಗುವುದು ಇದಕ್ಕೆ ತಗುಲುವ ಅಂದಾಜು ವೆಚ್ಚವೆಷ್ಟು;

ಋ) ಪ್ರಸಕ್ತ ಆಯವ್ಯಯದಲ್ಲಿ ಇದಕ್ಕಾಗಿ ಎಷ್ಟು ಹಣಗಳನ್ನು ಮೀಸಲಾಗಿರಿಸಲಾಗಿದೆ?